ಉಳ್ಳಾಲ ಕ್ಷೇತ್ರದ ಬೊಳಿಯಾರು ಗ್ರಾಮ ಬಹಳ ಮೂಲೆಯಲ್ಲಿದ್ದು, ಉಳ್ಳಾಲಕ್ಕೆ ಬಹಳ ದೂರದಲ್ಲಿದೆ. ಈ ಬೊಳಿಯಾರು ಗ್ರಾಮಕ್ಕೆ ಉಳ್ಳಾಲ ಆರೋಗ್ಯ ಕೇಂದ್ರದ ಘಟಕವೊಂದನ್ನು ತೆರೆಯಬೇಕೆಂದು ಜನರ ಒತ್ತಡ ಇದೆ. ಉಳ್ಳಾಲ ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯ ಕೂಡ ಮಾಡಿ ಕಳುಹಿಸಲಾಗಿದೆ. ಬೊಳಿಯೂರಿನಲ್ಲಿ ಘಟಕ ಸ್ಥಾಪನೆ ತುಂಬಾ ಉಪಕಾರ ನೀಡುತ್ತದೆ. ಈ ಕುರಿತು ಆರೋಗ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಕೊಡಿಸುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಮಳೆ ಬಾರದಿರುವುದರಿಂದ ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಇಡೀ ವಿಜಾಪುರ ಜಿಲ್ಲೆ ಸತತವಾಗಿ ನಾಲ್ಕನೆಯ ವರ್ಷವೂ ಮಳೆ ಬಾರದೆ ಅತ್ಯಂತ ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ವರ್ಷ ಅಲ್ಲಲ್ಲಿ ಅಕ್ಟೋಬರ್ ತಿಂಗಳ ಕೊನೆಯವಾರದಲ್ಲಿ ಸ್ವಲ್ಪ ಮಳೆಯೇನೋ ಆಯಿತು. ಆದರೆ ಅದರಿಂದ ಹೇಳಿಕೊಳ್ಳುವಂಥ ಯಾವುದೇ ಪ್ರಯೋಜನವಾಗಿಲ್ಲ. ಇಡೀ ವರ್ಷ ಜನತೆ ತಮ್ಮ ಜೀವನವನ್ನು ಸಾಗಿಸುವಷ್ಟು ದವಸಧಾನ್ಯಗಳು ಬರುವುದಿಲ್ಲ. ದನಕರುಗಳಿಗೆ ಬೇಕಾದ ಮೇವಿನ ಸ್ಥಿತಿಯೂ ಚಿಂತಾಜನಕವಾಗಿದೆ. ಘಟಪ್ರಭಾ ಎಡದಂಡೆ ಕಾಲುವೆಯಿಂದ ನೀರಾವರಿಯಾಗುವ ಜಮೀನುಗಳಿಂದ ಮುಧೋಳ, ಬೀಳಗಿ ಮತ್ತು ಜಮಖಂಡಿ ತಾಲ್ಲೂಕುಗಳ ಕೆಳಭಾಗಗಳನ್ನು ಬಿಟ್ಟರೆ ಜಿಲ್ಲೆಯ ಬಹುಭಾಗದಲ್ಲಿ ಪರಿಸ್ಥಿತಿ ಅತ್ಯಂತ ಹದಗೆಟ್ಟಿದೆ. ರೈತರು ಅದರಲ್ಲಿಯೂ ಭೂಹೀನ ಕಾರ್ಮಿಕರು, ಚಿಕ್ಕ ಹಾಗೂ ಅತಿ ಚಿಕ್ಕ ರೈತರು ಮಳೆಗಾಲ ಆರಂಭದವರೆಗೆ ಜೀವನ ಸಾಗಿಸುವಲ್ಲಿ ಅತ್ಯಂತ ದುಸ್ತರವಾಗಿದೆ. ಕನಿಷ್ಟ ನಾಲ್ಕು ತಿಂಗಳುಗಳ ಕಾಲ ಎಲ್ಲಾ ಜನ ವರ್ಗವನ್ನು ಸಂರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ತಮ್ಮ ಭವಿಷ್ಯದ ಕುರಿತು ಬಡಪರು ಅತ್ಯಂತ ಚಿಂತಾಕ್ರಾಂತರಾಗಿದ್ದಾರೆ. ಜಿಲ್ಲಾಧಿಕಾರಿಗಳೇನೋ ಕೆಲವು ಹಳ್ಳಿಗಳಲ್ಲಿ ಬರಗಾಲ ಕಾಮಗಾರಿಗಳನ್ನು ಆರಂಭಿಸುವುದಾಗಿ ಹೇಳಿದ್ದು ಅದಕ್ಕಾಗಿ ಬಿಡುಗಡೆ ಆಗಿರುವ ಹಣ ಒತಕ್ಕೂ ಸಾಲದು. ಅಷ್ಟು ಅಲ್ಪಹಣದಿಂದ ಜನರನ್ನು ನಾಲ್ಕು ತಿಂಗಳು ಕಾಲ ರಕ್ಷಿಸುವುದಕ್ಕಾಗುವುದಿಲ್ಲ. ಕಾರಣ ಇಡೀ ಜಿಲ್ಲೆಯಾದ್ಯಂತ ಕೂಡಲೇ ಬರಗಾಲ ಕಾಮಗಾರಿಗಳನ್ನು ಆರಂಭಿಸಲು, ದನಕರುಗಳಿಗೆ ಮೇವು ಸರಬರಾಜು ಮಾಡಲು ಮತ್ತು ಇನ್ನೂ ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿರುವವರ ಅನುಕೂಲಕ್ಕಾಗಿ ವಿಜಾಪುರ ಜಿಲ್ಲೆಗೆ ಈ ಕೂಡಲೇ ಬೃಹತ್ ಪ್ರಮಾಣದಲ್ಲಿ ಮೇವನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವರ್ಷ ವಿಜಾಪುರ ಜಿಲ್ಲೆಯ ೪೬೧ ಹಳ್ಳಿಗಳಲ್ಲಿ ೬,೭೦,೬೨೯ ಜನರು ಅಭಾವ ಪೀಡಿತಕ್ಕೆ ಒಳಗಾಗಿದ್ದಾರೆ. ವಿಜಾಪುರ ಜಿಲ್ಲೆಗೆ ೧-೪-೧೯೮೬ ರಿಂದ ೩೦-೯-೧೯೮೬ ರವರೆಗೆ ಅಭಾವ ಪರಿಹಾರ ಕಾರ್ಯಕ್ರಮಗಳಾದ ಕುಡಿಯುವ ನೀರಿನ ಸಾಗಾಣಿಕೆ, ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೊಳವೆಬಾವಿಗಳ ತೋಡುವಿಕೆ, ಮೇವು ಸರಬರಾಜು, ಪೌಷ್ಟಿಕ ಆಹಾರ, ಪಶುಸಂಗೋಪನೆ, ಕೃಷಿ ಮಿನಿ ಕಿಟ್ಸ್ ಉದ್ಯೋಗ ಪೂರಕ ಕಾಮಗಾರಿಗಳು ಮುಂತಾದವುಗಳಿಗೆ ೩೩೭.೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ೩೪೪.೪೫ ಲಕ್ಷ ರೂಪಾಯಿಗಳನ್ನು ವಿಜಾಪುರ ಜಿಲ್ಲಾಧಿಕಾರಿ ಅವಶ್ಯಕತೆ ಇದ್ದ ಕಡೆ ಖರ್ಚು ಮಾಡಿದ್ದಾರೆ. ಅಕ್ಟೋಬರ್ ನಂತರ ಬಾಕಿ ಉಳಿದ ಬಿಲ್ಲುಗಳ ಪಾವತಿಗಾಗಿ ೨೮.೯೯ ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಹಾಗೂ ಹೊಸ ಕೆಲಸಗಳಿಗಾಗಿ ಹನ್ನೊಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ.

ಇದಲ್ಲದೆ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಅಗತ್ಯವಿರುವ ಪ್ರದೇಶಗಳಲ್ಲಿ ಯೋಜನಾ ಕಾರ್ಯಕ್ರಮಗಳಾದ ಎನ್. ಆರ್. ಇ. ಪಿ. ಡಿ. ಪಿ. ಎ. ಪಿ. ಮತ್ತು ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವಂತೆ ಹಾಗೂ ಅವಶ್ಯವಿರುವ ಪ್ರದೇಶಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಪರಿಸ್ಥಿತಿ ಉತ್ತಮಗೊಳ್ಳುವವರೆಗೆ ಮುಂದುವರಿಸಿಕೊಂಡು ಬರಲು ಆದೇಶಿಸಲಾಗಿದೆ.